**ವಿಷಯ :** ಹಿಂದಿನ ಟಿ.ಡಿ.ಬಿ./ಡಿ.ಆರ್.ಡಿ.ಎಸ್./ ಜಿಲ್ಲಾ ಪರಿಷತ್ ಸೇವೆಯ ನೌಕರರನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಗೊಳಿಸುವ ಬಗ್ಗೆ.

**ಸಂಖ್ಯೆ : ಗ್ರಾಅಪ :** 205 ಪ್ರಾಇಸೇ 2016

215. ಕಂಡಿಕೆ-213ರಲ್ಲಿ ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರು ಅನುಮೋದಿಸಿರುವಂತೆ ಪುಟ-509-406 ರಲ್ಲಿರುವಂತೆ ಸಚಿವ ಸಂಪುಟದ ಟಿಪ್ಪಣಿ (ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ) ಯನ್ನು ಸಚಿವ ಸಂಪುಟದ ಅನುಮೋದನೆಗೆ ಮಂಡಿಸುವ ಸಲುವಾಗಿ ಕಡತವನ್ನು ಮಾನ್ಯ ಮುಖ್ಯ ಕಾರ್ಯದರ್ಶಿ ರವರಿಗೆ ಸಲ್ಲಿಸಬಹುದು.

**ಅಧೀನ ಕಾರ್ಯದರ್ಶಿ** 23/1/17.

**216. ಹೆಚ್ಚುವರಿ ಕಾರ್ಯದರ್ಶಿ (ಆ)]**

23/1/17

---

**217. ಪ್ರಧಾನ ಕಾರ್ಯದರ್ಶಿ ರವರು]**

23/1/17

---

**218. ಮುಖ್ಯ ಕಾರ್ಯದರ್ಶಿ ರವರು]**

S/O/76/17
24.01.2017

ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಸೇವೆಗಳು (ಡಿ.ಆರ್.ಡಿ.ಎಸ್ ಮತ್ತು ಟಿ.ಡಿಬಿ ಮತ್ತು ಜಿಲ್ಲಾ ಪರಿಷತ್ ನೌಕರರ ವಿಲೀನಾತಿ) (ವಿಶೇಷ) ನಿಯಮಗಳು, 2016ನ್ನು ಹೊರಡಿಸಲು ಹಾಗೂ ಈ ಕುರಿತು ಸ್ವೀಕರಿಸಬಹುದಾದ ಆಕ್ಷೇಪಣೆಗಳು ಮತ್ತು ಸಲಹೆಗಳು ಏನಾದರೂ ಇದ್ದಲ್ಲಿ, ಅವುಗಳನ್ನು ಕುರಿತು ಪರಿಗಣಿಸಲು ಪುನ: ಸಚಿವ ಸಂಪುಟದ ಮುಂದೆ ಮಂಡಿಸಬೇಕಾಗುತ್ತದೆ. ಒಂದು ವೇಳೆ, ಆಕ್ಷೇಪಣೆಗಳು ಮತ್ತು ಸಲಹೆಗಳು ಸ್ವೀಕೃತಿಯಾಗದೆ ಇದ್ದಲ್ಲಿ ಮತ್ತೆ ಸಚಿವ ಸಂಪುಟದ ಮುಂದೆ ವಿಷಯವನ್ನು ಮಂಡಿಸದೆ ಅಂತಿಮ ನಿಯಮಗಳನ್ನು ಹೊರಡಿಸಲು ಮಾತ್ರ ಇಲಾಖೆಗೆ ಅಧಿಕಾರವಿರುತ್ತದೆ. ಮುಂದುವರೆದು, ಸ್ವೀಕೃತವಾದ ಆಕ್ಷೇಪಣೆಗಳು "minor nature" ಆಕ್ಷೇಪಣೆಗಳು ಎಂದು ಇಲಾಖೆಯೇ ಪರಿಗಣಿಸುವುದು ಸೂಕ್ತ ಕ್ರಮವಾಗಿರುವುದಿಲ್ಲ. ಅದರಂತೆ ಸಚಿವ ಸಂಪುಟದ ಟಿಪ್ಪಣಿಯ ಕಂಡಿಕೆ 11(2)ನ್ನು ಮಾರ್ಪಡಿಸಿ ಮಂಡಿಸುವಂತೆ ಇಲಾಖೆಯನ್ನು ಕೋರಲಾಗಿದೆ.

Sharanappa
(ಶರಣಪ್ಪ)
ಸರ್ಕಾರದ ಮುಖ್ಯ ಕಾರ್ಯದರ್ಶಿಯವರ 1/2/17
ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ)

219. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ[redacted] ರಾಜ್ ಇಲಾಖೆ.

1/2/17

ಉಕಾ(ಆ) 6/2/17.

**ವಿಷಯ:** ಹಿಂದಿನ ಡಿಡಿಬಿ / ಡಿಆರ್‌ಡಿಎ / ಜಿಲ್ಲಾ ಪಂಚಾಯತ್ ನೇಮಕದ ನೌಕರರನ್ನು ಪಂ.ರಾ.ಇ. ಇಲಾಖೆಯಲ್ಲಿ ವಿಲೀನಗೊಳಿಸುವ ಬಗ್ಗೆ

**ಸಂಖ್ಯೆ : ಗ್ರಾಅಪ :** 205 ಜಿಪಸೇ 14

219. ಕಂಡಿಕೆ-218 ರಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ ರವರು ಪ್ರಸಕ್ತ ಕಡತದಲ್ಲಿ ಈ ಹಿಂದೆ ಸಲ್ಲಿಸಲಾದ ಸಚಿವ ಸಂಪುಟದ ಕಂಡಿಕೆ-11 (2) ರಲ್ಲಿ ನಮೂದಿಸಿದ ಅಂಶಗಳನ್ನು ಮಾರ್ಪಡಿಸಲು ಸೂಚಿಸಿರುತ್ತಾರೆ. ಅದರಂತೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮಂಡಿಸಿರುವ ಸಚಿವ ಸಂಪುಟದ ಕಂಡಿಕೆ-11 (2) ರಲ್ಲಿ ಈ ಹಿಂದೆ ನಮೂದಿಸಿದ ಟಿಪ್ಪಣಿಯನ್ನು ಮಾನ್ಯ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ ರವರ ಸೂಚನೆಯಂತೆ ಮಾರ್ಪಡಿಸಿ ಪರಿಷ್ಕೃತ ಟಿಪ್ಪಣಿಯನ್ನು ಅನುಮೋದನೆ / ಸಹಿಗಾಗಿ ಸಲ್ಲಿಸಿದೆ.

[signature] 03/2/17

**ಉಪ ಕಾರ್ಯದರ್ಶಿ (ಆ)**
ಉ.ಕಾ. (ಆಡಳಿತ-1)
ಗ್ರಾ.ಅ.ಪಂ.ರಾಜ್ ಇಲಾಖೆ

**220. ಪ್ರಧಾನ ಕಾರ್ಯದರ್ಶಿ ರವರು]**

[signature] 2/2/17

ಡಾ. ...
ಸರ್ಕಾರದ ...
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**221. ಮಾನ್ಯ ಮುಖ್ಯ ಕಾರ್ಯದರ್ಶಿ ರವರು]**

[signature] 21/2/17

ಡಾ|| ಸುಭಾಷ್ ಚಂದ್ರ ಖುಂಟಿಆ
ಸರ್ಕಾರದ ಮುಖ್ಯ ಕಾರ್ಯದರ್ಶಿ

222) ಕಂಡಿಕೆ-214 ರಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಅನುಮೋದಿಸಿರುವ ಟಿಪ್ಪಣಿ ಮತ್ತು ವಿಷಯವನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗುವುದು.

Sharanappa 21/2

(ಶರಣಪ್ಪ)
ಸರ್ಕಾರದ ಮುಖ್ಯ ಕಾರ್ಯದರ್ಶಿಯವರ
ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ)
ಕರ್ನಾಟಕ ಸರ್ಕಾರ
ವಿಧಾನಸೌಧ, ಬೆಂಗಳೂರು

CS/D/136/2017
08.02.2017

469 ... /2/17

**ವಿಷಯ :-** ಜಿಲ್ಲಾ ಪಂಚಾಯತ್ ಸೇವೆಗೆ ಸೇರಿದ ಹಿರಿಯ ಭೂ ವಿಜ್ಞಾನಿಗಳ ಸೇವಾ ವಿಲೀನತೆ ಕುರಿತು ಮನವಿ

**ಗ್ರಾಅಪ** 199 ಸೇಶಿ 2017

223. ಪುಟ–73 ರಿಂದ 69ರಲ್ಲಿನ ಸ್ವೀಕೃತಿಯನ್ನು ಅವಗಾಹಿಸುವುದು. ಈ ಹಿಂದೆ ಡಿ.ಆರ್.ಡಿ.ಎಸ್. ಗಳಲ್ಲಿ ಭೂ ವಿಜ್ಞಾನಿಗಳೆಂದು ನೇಮಕಗೊಂಡು ನಂತರದಲ್ಲಿ ಸೇವಾ ಸಕ್ರಮಾತಿ ಹೊಂದಿದ 20 ಭೂ ವಿಜ್ಞಾನಿಗಳಲ್ಲಿ ಈಗಾಗಲೇ 7 ಜನ ಸೇವೆಯಿಂದ ನಿವೃತ್ತಿ ಹೊಂದಿದ್ದು, ಪ್ರಸ್ತುತ 13 ಜನ ಸೇವೆಯಲ್ಲಿರುತ್ತಾರೆ. ಸದರಿಯವರುಗಳು ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರಿಗೆ ಮನವಿ ಸಲ್ಲಿಸಿ ಇತ್ತೀಚೆಗೆ ಸರ್ಕಾರವು ಹಿಂದಿನ ಟಿ.ಡಿ.ಬಿ./ಡಿ.ಆರ್.ಡಿ.ಎಸ್./ಜಿಲ್ಲಾ ಪರಿಷತ್‌ಗಳಲ್ಲಿ ನೇಮಕಾತಿ ಹೊಂದಿದ ನೌಕರರುಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಗೊಳಸಿ ಸದರಿಯವರುಗಳಿಗೆ ನಿವೃತ್ತಿ ಸೌಲಭ್ಯಗಳು ಸಿಗುವಂತೆ ಮಾಡಿದ್ದು, ಅದರಂತೆ ಅವರಿಗೂ ಸಹ ಪಂ.ರಾ.ಇಂ.ಇಲಾಖೆಯಲ್ಲಿ ವಿಲೀನಗೊಳಸಬೇಕೆಂದು ಮನವಿ ಸಲ್ಲಿಸಿದ್ದಾರೆ.

224. ಈ ಸಂಬಂಧಿತ ಮಾಹಿತಿಯನ್ನು ಪರಿಶೀಲಿಸಲಾಗಿ, ಪರಿಶೀಲನೆಯಲ್ಲಿರುವ ಜಿಲ್ಲಾ ಪಂಚಾಯತ್ ಸೇವೆಗೆ ಸೇರಿದ 20 ಜನ ಹಿರಿಯ ಭೂ ವಿಜ್ಞಾನಿಗಳ ವಿವರಗಳನ್ನು ಪುಟ–69 ರಲ್ಲಿ ನೋಡಬಹುದು. ಸದರಿಯವರುಗಳು 1982–87ರ ಅವಧಿಯಲ್ಲಿ ಹಿಂದಿನ ಟಿ.ಡಿ.ಬಿ./ ಡಿ.ಆರ್.ಡಿ.ಎಸ್./ಜಿಲ್ಲಾ ಪರಿಷತ್‌ಗಳಲ್ಲಿ ನೇಮಕಾತಿ ಹೊಂದಿದವರಾಗಿರುತ್ತಾರೆ. ಸದರಿಯವರುಗಳನ್ನು ಸರ್ಕಾರವು ನಂತರದಲ್ಲಿ ಸೇವಾ ಸಕ್ರಮಾತಿಗೊಳಸಿ ಆಯಾ ಜಿಲ್ಲಾ ಪಂಚಾಯಿತಿಗಳಲ್ಲಿಯೇ ಮುಂದುವರೆಸಿರುತ್ತದೆ. ಪ್ರಾರಂಭದಲ್ಲಿ ಸದರಿಯವರುಗಳು ಸಹಾಯಕ ಭೂ ವಿಜ್ಞಾನಿ ಹುದ್ದೆಯಲ್ಲಿ ನೇಮಕಾತಿ ಹೊಂದಿದವರಾಗಿದ್ದು, ನಂತರ ಸದರಿ ಹುದ್ದೆಯ ಪದನಾಮವನ್ನು ಭೂ ವಿಜ್ಞಾನಿ ಎಂದು ಪುನರ್ ಪದನಾಮೀಕರಿಸಲಾಗಿದೆ. ಸದರಿ ಹುದ್ದೆಯ ವೇತನ ಶ್ರೇಣಿಯು ರೂ.22800–43200 ಆಗಿರುತ್ತದೆ.

225. ಈ ರೀತಿ ಸಕ್ರಮಾತಿ ಹೊಂದಿದ ಭೂ ವಿಜ್ಞಾನಿಗಳಿಗೆ ಯಾವುದೇ ಮುಂಬಡ್ತಿ ಅವಕಾಶವಿಲ್ಲದ ಅಂಶವನ್ನು ಸರ್ಕಾರವು ಪರಿಗಣಿಸಿ ಸದರಿಯವರಿಗಳಿಗೆ ಹಿರಿಯ ಭೂ ವಿಜ್ಞಾನಿ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆಯನ್ನು ಕಾಯ್ದಿರಿಸಿ ಕಾರ್ಯಕಾರಿ ಆದೇಶವನ್ನು ದಿನಾಂಕ: 25.09.2007ರಂದು ಹೊರಡಿಸಿರುತ್ತದೆ. (ಪುಟ–25 ರಿಂದ 21) ಮೂಲತಃ ಜಿಲ್ಲಾ ಪಂಚಾಯಿತಿಗಳಲ್ಲಿ ಮಂಜೂರಾಗಿದ್ದ ಹಿರಿಯ ಭೂ ವಿಜ್ಞಾನಿ ಹುದ್ದೆಗಳು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗಣಿ ಮತ್ತು ಭೂ ವಿಜ್ಞಾನಿ ಇಲಾಖೆಯ ವ್ಯಾಪ್ತಿಗೆ ಬರುತ್ತವೆ. ಹಿಂದಿನ ಡಿ.ಆರ್.ಡಿ.ಎಸ್.ಗಳಲ್ಲಿ ನೇಮಕಾತಿ ಹೊಂದಿದ ಪ್ರಸಕ್ತ ಪರಿಶೀಲನೆಯಲ್ಲಿರುವ ಭೂ ವಿಜ್ಞಾನಿಗಳಿಗೆ ಸರ್ಕಾರದ ಹಂತದಲ್ಲಿ ದಿನಾಂಕ: 10.09.2008ರ ಆದೇಶದಲ್ಲಿ ಹಿರಿಯ ಭೂ ವಿಜ್ಞಾನಿ ವೃಂದಕ್ಕೆ ಮುಂಬಡ್ತಿ ನೀಡಿ 4 ಅಧಿಕಾರಿಗಳಿಗೆ ಮಾತ್ರ **ಹಿರಿಯ ಭೂ** ವಿಜ್ಞಾನಿ ಹುದ್ದೆಗೆ ನೇಮಿಸಿದ್ದು, ಉಳಿದ 16 ಅಧಿಕಾರಿಗಳಿಗೆ ಗ್ರಾ.ಅ.ಪಂ.ರಾಜ್ ಇಲಾಖೆಯಲ್ಲಿ ಹಿರಿಯ ಭೂ ವಿಜ್ಞಾನಿ ವೃಂದದ ಸಮಾನಾಂತರ ಹುದ್ದೆಗಳಾದ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ, ಸಹಾಯಕ ಕಾರ್ಯದರ್ಶಿ / ಸಹಾಯಕ ಯೋಜನಾಧಿಕಾರಿ ಹುದ್ದೆಗಳಿಗೆ ನೇಮಿಸಿದ್ದು, ತದನಂತರ ಬಹುತೇಕ ಹಿರಿಯ ಭೂ ವಿಜ್ಞಾನಿಗಳು ಈ ಹುದ್ದೆಯಲ್ಲಿಯೇ ಮುಂದುವರೆದಿರುತ್ತಾರೆ.

226. ಗ್ರಾ.ಅ.ಪಂ.ರಾಜ್ ಇಲಾಖೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ / ಸಹಾಯಕ ಕಾರ್ಯದರ್ಶಿ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಕೋಟಾದ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ 2010ನೇ ಸಾಲಿನಿಂದ ಸತತವಾಗಿ ಪತ್ರ ವ್ಯವಹಾರ ಮಾಡುತ್ತಿದ್ದಾಗ್ಯೂ ಸಹ ಕೆಲವೊಂದು ಕಾರಣಗಳಿಗಾಗಿ ಈ ಹುದ್ದೆಗಳನ್ನು ಇದುವರೆವಿಗೂ ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. ಹೀಗಾಗಿ ಖಾಲಿ ಇದ್ದ ಕಾ.ನಿ.ಅ. / ಸಹಾಯಕ ಕಾರ್ಯದರ್ಶಿ ಹುದ್ದೆಗಳಲ್ಲಿಯೇ ಹಿರಿಯ ಭೂ ವಿಜ್ಞಾನಿಗಳು ಮುಂದುವರೆದು ಕೆಲಸ ನಿರ್ವಹಿಸುತ್ತಿದ್ದಾರೆ.

227. ಇತ್ತೀಚಿಗೆ ಈ ಹಿಂದೆ ಟಿ.ಡಿ.ಬಿ./ಡಿ.ಆರ್.ಡಿ.ಎಸ್./ಜಿಲ್ಲಾ ಪರಿಷತ್ ಗಳಲ್ಲಿ ನೇಮಕಾತಿ ಹೊಂದಿದ ನೌಕರರುಗಳಿಗೆ ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ನಿವೃತ್ತಿ ಸೌಲಭ್ಯಗಳು ಮತ್ತು ಪಿಂಚಣಿ ಲಭ್ಯವಾಗದೇ ಇರುವುದರಿಂದ ಸದರಿಯವರುಗಳನ್ನು ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಸೇವೆಗಳು (ಹಿಂದಿನ ಡಿ.ಆರ್.ಡಿ.ಎಸ್., ಟಿ.ಡಿ.ಬಿ., ಮತ್ತು ಜಿಲ್ಲಾ ಪರಿಷತ್‌ಗಳ ನೌಕರರ ವಿಲೀನಾತಿ) (ವಿಶೇಷ) ನಿಯಮಗಳು 2016ನ್ನು ರಚಿಸುವ ಮೂಲಕ 878 ನೌಕರರನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಮಂಜೂರಾದ ಖಾಲಿ ಇದ್ದ ಹುದ್ದೆಗಳಿಗೆ ವಿಲೀನಾತಿ ಮಾಡಲಾಗಿದೆ. ಆದರೆ ಪ್ರಸ್ತುತ ಪರಿಶೀಲನೆಯಲ್ಲಿರುವ ಹಿರಿಯ ಭೂ ವಿಜ್ಞಾನಿಗಳಿಗೆ ಸಾಕಷ್ಟು ಹುದ್ದೆಗಳು ಲಭ್ಯವಿಲ್ಲದ ಕಾರಣ ಸದರಿಯವರುಗಳ ಪ್ರಕರಣವನ್ನು ಆ ಸಂದರ್ಭದಲ್ಲಿ ಪರಿಗಣಿಸಿರಲಿಲ್ಲ.

228. ಹಿಂದಿನ ಟಿ.ಡಿ.ಬಿ., ಡಿ.ಆರ್.ಡಿ.ಎಸ್. ಮತ್ತು ಜಿಲ್ಲಾ ಪರಿಷತ್ ಗಳಲ್ಲಿ ನೇಮಕಾತಿ ಹೊಂದಿದ ನೌಕರರುಗಳ ವಿಷಯವನ್ನು ಸಚಿವ ಸಂಪುಟದ ಮುಂದೆ ಮಂಡಿಸುವ ಸಂದರ್ಭದಲ್ಲಿ ಕಡತವನ್ನು ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರಿಗೆ ಸಲ್ಲಿಸಿದ್ದು, ಹಿರಿಯ ಭೂ ವಿಜ್ಞಾನಿಗಳ ಕುರಿತಂತೆ ಪ್ರತ್ಯೇಕವಾಗಿ ಕರಡು ಸಚಿವ ಸಂಪುಟ ಟಿಪ್ಪಣಿಯನ್ನು ಮಂಡಿಸಲು ಕಂಡಿಕೆ-213ರಲ್ಲಿ ಆದೇಶಿಸಿರುವುದನ್ನು ದಯವಿಟ್ಟು ನೋಡಬಹುದು. ಆದಾಗ್ಯೂ ಪಂ.ರಾ.ಇಂ.ಇಲಾಖೆಯಲ್ಲಿ ಸಾಕಷ್ಟು ಹಿರಿಯ ಭೂ ವಿಜ್ಞಾನಿಗಳ ಹುದ್ದೆಗಳ ಲಭ್ಯವಿಲ್ಲದ ಕಾರಣ ಈ ವಿಷಯವು ಈ ಹಂತದಲ್ಲಿಯೇ ಬಾಕಿ ಉಳಿದಿರುತ್ತದೆ.

229. ಪ್ರಸ್ತುತ ಸೇವೆಯಲ್ಲಿರುವ ಹಾಗೂ ನಿವೃತ್ತಿ ಹೊಂದಿರುವ ಕೆಲವು ಭೂ ವಿಜ್ಞಾನಿಗಳು ಸರ್ಕಾರಕ್ಕೆ ಸಲ್ಲಿಸಿರುವ ಮನವಿಯಲ್ಲಿ 20 ಹಿರಿಯ ಭೂ ವಿಜ್ಞಾನಿಗಳ ಪೈಕಿ ಈಗಾಗಲೇ 7 ಜನ ಸೇವೆಯಿಂದ ನಿವೃತ್ತಿ ಹೊಂದಿದ್ದು, ಪ್ರಸಕ್ತ 13 ಜನ ಮಾತ್ರ ಸೇವೆಯಲ್ಲಿರುವುದಾಗಿಯೂ, ಪಂ.ರಾ.ಇಂ.ಇಲಾಖೆಯಲ್ಲಿ ಮಂಜೂರಾದ 8 ಹಿರಿಯ ಭೂ ವಿಜ್ಞಾನಿ ಹುದ್ದೆಗಳಿದ್ದು, ಈ ಪೈಕಿ ಪಂ.ರಾ.ಇಂ.ಇಲಾಖೆಯ ಒಬ್ಬರೇ ಅಧಿಕಾರಿ ಮಾತ್ರ ಸೇವೆಯಲ್ಲಿದ್ದು, ಉಳಿದ 7 ಹುದ್ದೆಗಳು ಖಾಲಿ ಇವೆ ಎಂದೂ, ಭೂ ವಿಜ್ಞಾನಿಗಳ ವೃಂದದಲ್ಲಿ ಪ್ರಸಕ್ತ 5 ಹುದ್ದೆಗಳು ಖಾಲಿ ಇದ್ದು, ಒಬ್ಬರು ಆಗಸ್ಟ್-2017 ರಲ್ಲಿ ಸೇವೆಯಿಂದ ನಿವೃತ್ತಿ ಹೊಂದುತ್ತಿರುವುದರಿಂದ ಭೂ ವಿಜ್ಞಾನಿಗಳ ಈ 6 ಹುದ್ದೆಗಳನ್ನು ತಾತ್ಕಾಲಿಕವಾಗಿ ಹಿರಿಯ ಭೂ ವಿಜ್ಞಾನಿ ವೃಂದಕ್ಕೆ ಮುಂದುವರೆಸಿದಲ್ಲಿ ಸೇವೆಯಲ್ಲಿರುವ 13 ಭೂ ವಿಜ್ಞಾನಿಗಳನ್ನು ಈ ಹುದ್ದೆಗಳಲ್ಲಿ ವಿಲೀನಗೊಳಿಸಲು ಅವಕಾಶವಿರುವುದರಿಂದ ಈ ದಿಸೆಯಲ್ಲಿ ಸೂಕ್ತ ಕ್ರಮ ವಹಿಸಲು ಕೋರಿದ್ದಾರೆ.

**ವಿಷಯ** : ಜಿಲ್ಲಾ ಪಂಚಾಯತ್ ಸೇವೆಗೆ ಸೇರಿದ ಹಿರಿಯ ಭೂ ವಿಜ್ಞಾನಿಗಳ ಸೇವೆ ವಿಲೀನ ಕುರಿತು

**ಗ್ರಾಅಪ** 199 ಸೇವೆ 2017

ಸದರಿ ಮನವಿ ಮೇಲೆ ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ವಿಶೇಷ ಕರ್ತವ್ಯಾಧಿಕಾರಿ ರವರು ಸದರಿ ಮನವಿಯ ಕುರಿತು ಪರಿಶೀಲಿಸಿ ಅಗತ್ಯ ಕ್ರಮ ಜರುಗಿಸುವಂತೆ ತಿಳಿಸಿರುವುದನ್ನು ಪುಟ-73 ರಲ್ಲಿ ನೋಡಬಹುದು.

230. ಸದರಿ ಕೋರಿಕೆ ಮತ್ತು ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ವಿಶೇಷ ಕರ್ತವ್ಯಾಧಿಕಾರಿ ರವರ ಟಿಪ್ಪಣಿಯ ಹಿನ್ನಲೆಯಲ್ಲಿ ವಿಷಯವನ್ನು ಪರಿಶೀಲಿಸಲಾಗಿ, ಪಂ.ರಾ.ಇಂ.ಇಲಾಖೆಗೆ ಒಟ್ಟಾರೆ 8 ಮಂಜೂರಾದ ಹಿರಿಯ ಭೂ ವಿಜ್ಞಾನಿ ಹುದ್ದೆಗಳು ಇರುತ್ತದೆ. ಈ ಪೈಕಿ ಒಬ್ಬರು ಮಾತ್ರ ಪಂ.ರಾ.ಇಂ.ಇಲಾಖೆಯ ಅಧಿಕಾರಿಯಾದ ಶ್ರೀ ನಂಜುಂಡ ಶರ್ಮ ಇವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಉಳಿದಂತೆ ಪಂ.ರಾ.ಇಂ.ಇಲಾಖೆಯ ಮುಂಬಡ್ತಿ ಹೊಂದಿದ ಅಧಿಕಾರಿ ಗಳಿರುವುದಿಲ್ಲ. ಹೀಗಾಗಿ 7 ಹಿರಿಯ ಭೂ ವಿಜ್ಞಾನಿ ಹುದ್ದೆಗಳು ಖಾಲಿ ಇವೆ. ಭೂ ವಿಜ್ಞಾನಿ ವೃಂದದಲ್ಲಿ ಮಂಜೂರಾದ ಒಟ್ಟು 30 ಹುದ್ದೆಗಳಿದ್ದು, ಈ ಪೈಕಿ 25 ಜನ ಸೇವೆಯಲ್ಲಿರುತ್ತಾರೆ. ಈ ಪೈಕಿ ಶ್ರೀ ಎನ್.ವೆಂಕಟೇಶ್ ಇವರು ಆಗಸ್ಟ್-2017 ರಂದು ಸೇವೆಯಿಂದ ನಿವೃತ್ತಿ ಹೊಂದುತ್ತಿರುವುದರಿಂದ ಭೂ ವಿಜ್ಞಾನಿ ವೃಂದದಲ್ಲಿ ಒಟ್ಟು 6 ಹುದ್ದೆಗಳು ಲಭ್ಯವಾಗಲಿವೆ. ಭೂ ವಿಜ್ಞಾನಿ ವೃಂದದ ಹುದ್ದೆಗಳು ಗ್ರೂಪ್-ಬಿ ವೃಂದ ವೇತನ ಶ್ರೇಣಿ ಹೊಂದಿದ ಹುದ್ದೆಗಳಾಗಿರುತ್ತವೆ. ಹಿರಿಯ ಭೂ ವಿಜ್ಞಾನಿ ವೃಂದದ ಹುದ್ದೆಗಳು ಗ್ರೂಪ್-ಎ ಕಿರಿಯ ಶ್ರೇಣಿ ವೃಂದದ ಹುದ್ದೆಯಾಗಿದ್ದು, ವೇತನ ಶ್ರೇಣಿ ರೂ.28100-50100 ಅನ್ನು ಹೊಂದಿರುತ್ತದೆ. ಭೂ ವಿಜ್ಞಾನಿ ವೃಂದದ ಹುದ್ದೆಯನ್ನು ತಾತ್ಕಾಲಿಕವಾಗಿ ಉನ್ನತೀಕರಿಸಬೇಕಾದಲ್ಲಿ ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸಹಮತಿ ಅವಶ್ಯವಿರುತ್ತದೆ. ಒಂದು ವೇಳೆ ಆರ್ಥಿಕ ಇಲಾಖೆಯು ಭೂ ವಿಜ್ಞಾನಿ ವೃಂದದ 6 ಹುದ್ದೆಗಳನ್ನು ತಾತ್ಕಾಲಿಕವಾಗಿ ಮೇಲ್ದರ್ಜೆಗೇರಿಸಲು ಅಂದರೆ ಹಿಂದಿನ ಟಿ.ಡಿ.ಬಿ., ಡಿ.ಆರ್.ಡಿ.ಎಸ್. ಮತ್ತು ಜಿಲ್ಲಾ ಪರಿಷತ್ ಗಳ ಹಿರಿಯ ಭೂ ವಿಜ್ಞಾನಿಗಳು ಸೇವೆಯಿಂದ ನಿವೃತ್ತಿ ಹೊಂದಿದಲ್ಲಿ ಅಥವಾ ಇತರೆ ಕಾರಣಕ್ಕಾಗಿ ಹುದ್ದೆ ಖಾಲಿ ಆದಲ್ಲಿ ಪುನಃ ಸದರಿ ಹುದ್ದೆಯನ್ನು ಮೂಲ ವೃಂದಕ್ಕೆ ಹಿಂದಿರುಗಿಸುವ ಷರತ್ತಿನೊಂದಿಗೆ ಒಪ್ಪಿಗೆ ನೀಡಿದಲ್ಲಿ ಹಿರಿಯ ಭೂ ವಿಜ್ಞಾನಿ ವೃಂದದಲ್ಲಿ ಒಟ್ಟಾರೆ 13 ಹುದ್ದೆಗಳು ಲಭ್ಯವಾಗಲಿವೆ. ಪ್ರಸ್ತುತ ಹಿಂದಿನ ಟಿ.ಡಿ.ಬಿ. ಡಿ.ಆರ್.ಡಿ.ಎಸ್., ಮತ್ತು ಜಿಲ್ಲಾ ಪರಿಷತ್ ಗಳಲ್ಲಿ ನೇಮಕಾತಿ ಹೊಂದಿದ ಹಿರಿಯ ಭೂ ವಿಜ್ಞಾನಿಗಳು 13 ಜನ ಇರುತ್ತಾರೆ. ಉಳಿದ 7 ಜನ ಈಗಾಗಲೇ ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ.

231. ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಪಂ.ರಾ.ಇಂ.ಇಲಾಖೆಯಲ್ಲಿ 30 ಭೂ ವಿಜ್ಞಾನಿ ಹುದ್ದೆಗಳು ಮಂಜೂರಾಗಿದ್ದು, ಅವುಗಳ ಪೈಕಿ 25 ಭೂ ವಿಜ್ಞಾನಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು 5 ಹುದ್ದೆಗಳು ಖಾಲಿ ಇರುತ್ತವೆ. ಒಂದು ಹುದ್ದೆ ಆಗಸ್ಟ್-2017ರಲ್ಲಿ ನಿವೃತ್ತಿಯಿಂದ ಲಭ್ಯವಾಗಲಿದ್ದು ಆಗಸ್ಟ್ ಅಂತ್ಯಕ್ಕೆ 6 ಭೂ ವಿಜ್ಞಾನಿ ಹುದ್ದೆಗಳು ಖಾಲಿ ಉಳಿಯುತ್ತವೆ. ಈ ರೀತಿ ಖಾಲಿ ಉಳಿಯುವ ಭೂ ವಿಜ್ಞಾನಿ ಹುದ್ದೆಗಳನ್ನು ಹಿರಿಯ ಭೂ ವಿಜ್ಞಾನಿ ವೃಂದಕ್ಕೆ ಮೇಲ್ದರ್ಜೆಗೇರಿಸಲು ಆರ್ಥಿಕ ಇಲಾಖೆಯು ಒಪ್ಪಿಗೆ ನೀಡಿದಲ್ಲಿ ಪ್ರಸಕ್ತ ಸೇವೆಯಲ್ಲಿರುವ ಹಿಂದಿನ ಟಿ.ಡಿ.ಬಿ./ಡಿ.ಆರ್.ಡಿ.ಎಸ್./ಜಿಲ್ಲಾ ಪರಿಷತ್ ಸೇವೆಯ 13 ಭೂ ವಿಜ್ಞಾನಿ ಹುದ್ದೆಗಳನ್ನು ಒಂದು ಬಾರಿಯ ಕ್ರಮವಾಗಿ ವಿಲೀನಗೊಳಿಸಲು ಅವಕಾಶವಾಗುತ್ತದೆ.

ವಿಷಯ

ಗ್ರಾಅಪ 199 ಪಿಆರ್ 17

232. ಮೇಲಿನ ವಿವರಗಳನ್ನು ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಅವಗಾಹನೆಗೆ ಮಂಡಿಸಿ ಸೂಕ್ತ ಆದೇಶ ಪಡೆಯುವ ಕುರಿತು ಕಡತ ಮಂಡಿಸಿದೆ.

15/7/17

17/7/2018

233 ಕಂಡಿಕೆ 223 ರಿಂದ 231 ರ ವರೆಗಿನ ವಿವರಗಳನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅವಗಾಹನೆ ಆದೇಶಕ್ಕಾಗಿ ಸಲ್ಲಿಸಲಾಗಿದೆ.

ಉಪ ಕಾರ್ಯದರ್ಶಿ)

18/7/17

ಪ್ರಧಾನ ಕಾರ್ಯದರ್ಶಿ)

19/7/17

D.S. (Admn.-1)
RDPR Department

ಡಾ.ಎಸ್. ನಾಗಾಂಬಿಕಾ ದೇವಿ ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ

ಮಾನ್ಯ ಗ್ರಾ.ಅ. ಪಂ.ರಾಜ್

ಸಚಿವರು

ನೋಡಲಾಗಿದೆ.

4.8.2017

ಎಚ್.ಕೆ. ಪಾಟೀಲ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಉಪ ಕಾರ್ಯದರ್ಶಿ (ಆಡಳಿತ-1)
ಸಂಖ್ಯೆ 1665 ದಿನಾಂಕ 19/7/17
ಗ್ರಾ.ಅ.ಪಂ.ರಾಜ್ ಇಲಾಖೆ

Pr.Secy./RDPR
No.1902 Dt.20/7/17

ಗ್ರಾ.ಅ. ಮತ್ತು ಪಂ.ರಾಜ್ ಸಚಿವರ ಕಛೇರಿ
ಸಂಖ್ಯೆ 2045
ಸ್ವೀಕೃತಿ ದಿ.: 29/07/2017
ರವಾನೆ ದಿ.: 05/08/2017

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು)